ಶ್ರೀ ಕೋಣಂದೂರು ಲಿಂಗಪ್ಪ.—ತಾವು ಕೊಟ್ಟಂಥ ಅಂಕಿಅಂಶಗಳ ಪ್ರಕಾರ ಬೆಂಗಳೂರು ಸಿಟಿಯನ್ನು ಬಿಟ್ಟು ಎಷ್ಟು ಹಳ್ಳಿಗಳಲ್ಲಿ ಏಕ ಉಪಾಧ್ಯಾಯರ ಶಾಲೆಗಳು ಇರುವುದು ಎಂದು ಸ್ಪಷ್ಟವಾಯಿತು. ಕಳೆದ ವರ್ಷದಿಂದ ಸಾವಿರಾರು ಹಳ್ಳಿಯಲ್ಲಿರತಕ್ಕ ಏಕ ಉಪಾಧ್ಯಾಯರ ಶಾಲೆಗಳಿಗೆ ಅಧ್ಯಾಪಕರುಗಳನ್ನು ಕೊಡದೆ ಹಳ್ಳಿಗಳ ಮಕ್ಕಳು ಗುಡ್ಡಕ್ಕೆ ಹೋಗಬೇಕಾಯಿತು. ಈ ಪಾಪಕ್ಕೆ ನೀವು ಹೊಣೆಯಾಗುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಹಾಫ್ ಎ. ಮಿಲಿಯನ್ ಜಾಬ್ ಸ್ಕೀಂನಲ್ಲಿ 1500 ಟೀಚರ್ಸ್‌ಗಳನ್ನು ಪ್ರತಿಯೊಂದು ಕಡೆಯಲ್ಲಿಯೂ ಜಿಲ್ಲಾವಾರು ಕೊಟ್ಟಿದ್ದೇವೆ. ಕೆಲವು ಕಡೆಗಳಲ್ಲಿ ಉಪಾಧ್ಯಾಯರ ಸಂಖ್ಯೆ ಕಡಿಮೆ ಇದ್ದು ಅಲ್ಲಿಗೆ ಟೀಚರ್ಸ್ ಕೊಡದೇ ಇದ್ದರೂ ಅಲ್ಲಿಗೂ ಸಹ, ಮತ್ತು ಹಳ್ಳಿಗಳಲ್ಲಿರುವ ಪ್ರೈಮರಿ ಸ್ಕೂಲ್ಸ್‌ಗೆ ಪೇಕೆನ್ಸಿ ಇರುವ ಕಡೆ ಟೀಚರ್ಸ್‌ಗಳನ್ನು ಕೊಡುವಂಥ ಏರ್ಪಾಡನ್ನು ಖಂಡಿತ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಉಪಾಧ್ಯಾಯರ ಕೊರತೆ ಇರತಕ್ಕ ಶಾಲೆಗಳ ಸಂಖ್ಯೆಯನ್ನು ತಾವು ಖಡಾಖಂಡಿತವಾಗಿ ಸಂಗ್ರಹಿಸಿಲ್ಲ. ಇವತ್ತು ಪ್ರತಿಯೊಂದು ಜಿಲ್ಲೆಯಲ್ಲಿ ಟೀಚರ್ಸ್‌ಗಳನ್ನು ರೆಕ್ರೂಟ್‌ಮೆಂಟ್ ಮಾಡಿ ಲಿಸ್ಟ್‌ನ್ನು ಇಟ್ಟುಕೊಂಡು ಎಕಾನಮಿ ಆರ್ಡರ್ ಇರುವ ಕಾರಣ ಅವರನ್ನು ನೇಮಕ ಮಾಡುತ್ತಿಲ್ಲ. ಆದ್ದರಿಂದ ತಾವು ದಯವಿಟ್ಟು ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳತಕ್ಕ ನಂದರ್ಭದಲ್ಲಿ ಈ ಏಕಾನಮಿ ಆರ್ಡರನ್ನು ವಾಪಸ್ ಪಡೆಯುವುದಕ್ಕೆ ಮತ್ತು ಅವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀಮತಿ ಇ.ಇ. ವಾಜ್.-ಡಿ. ಎರ್.ಆರ್.ಸಿ. ಲಸ್ಟ್ ತಯಾರಾಗಿದೆ. ಜಾಗ್ರತೆಯಾಗಿ ಉಪಾಧ್ಯಾಯರುಗಳನ್ನು ನೇಮಕ ಮಾಡುತ್ತೇವೆ. ಒಂದು ತಿಂಗಳೊಳಗಾಗಿ ನೇಮಕ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀಮತಿ ನಿ. ನಾಗಮ್ಮ ಕೇಶವಮೂರ್ತಿ.—ಏಕ ಉಪಾಧ್ಯಾಯರ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿರುವ ಕಾರಣ ತಾವು ಜಾಗ್ರತೆಯಾಗಿ ಉಪಾಧ್ಯಾಯರುಗಳನ್ನು ಪೋಸ್ಟ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ವಿ. ಎಂ. ಘಾಡಿ.—ಹಾಫ್.—ಎ. ಮಿಲಿಯನ್ ಜಾಬ್ ಸ್ಕೀಂನಲ್ಲಿ ಸೇರಿಕೊಂಡಂಥವರು, ತಮ್ಮ ಒಂದು ಆರ್ಡರ್ ಪ್ರಕಾರ ಡಿಸೆಂಬರ್ ತಿಂಗಳ ಕೊನೆಯಲ್ಲಿ ಅವರು ಟರ್ಮಿನೇಟ್ ಆಗುತ್ತಾರೆ. ಅಮೇಲೆ ಅವರ ಪರಿಸ್ಥಿತಿ ಏನು ?

ಶ್ರೀಮತಿ ಇ. ಇ. ವಾಜ್.—ಅವರನ್ನು ಕಂಟಿನ್ಯೂ ಮಾಡುವಂಥ ಏರ್ಪಾಡು ನಡೆಯುತ್ತಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ಪೈಪಂಡರಿ ಟೀಚರ್ಸ್ ಆಗಿ ಕೆಲಸ ಮಾಡುವವರು ರಜಾದಲ್ಲಿ ಕೆಲಸ ಮಾಡಬೇಕು. ಅವರನ್ನು ನಮ್ಮ ರಾಜ್ಯದ ನೌಕರರನ್ನಾಗಿ ತೆಗೆದುಕೊಳ್ಳತ್ತೀರಾ ?

ಶ್ರೀಮತಿ ಇ. ಇ. ವಾಜ್.—ರಜಾದಲ್ಲಿ ಟೀಚರ್ಸ್ ಕೆಲಸ ಮಾಡುವುದು ಗೊತ್ತಿಲ್ಲ.

## Lift Irrigation from Shankathirthahalla in Alur Taluk

254. **Sri K. M. RUDRAPPA** (Sakleshpur)—

Will the Minister of State for Minior Irrigation be pleased to state.—

(*a*) whether there is any demand from the villagers of Madabalu, Bellur. Thippapur and Dindagatta villages for the Lift Irrigation Project from Shankathirthahalla near Madabalu village, Alur Taluk ;

(*b*) if so, the steps taken by the Public Works Department for the investigation and Survey of the Lift Irrigation Project ;

(*c*) if survey work is not taken up the reasons for the same ?

Sri S. B. NAGARAL(Minister of State for Minor Irrigation).—

(*a*) Yes.

(*b*) Investigation is done and the project is found technically infeasible.

(*c*) Does not arise in view of replies to (*a*) and (*b*). above.

ಶ್ರೀ ಕೆ.ಎಂ. ರುದ್ರಪ್ಪ.—ಶಂಕತೀರ್ಥಹಳ್ಳಕ್ಕೆ, ಲಫ್ ಇರಿಗೇಷನ್ ಪ್ರಾಜೆಕ್ಟ್ ಮಾಡುವುದು ಚೆಕ್ಕೆಕಲ ಇನ್‌ಫೀಸಿಬರ್ ಎಂದು ಹೇಳಿದ್ದೀರಿ, ನಾನು ಹೇಳುತ್ತೇನೆ, ಇದು ಫೀಸಿಬರ್ ಆಗುತ್ತದೆ ಎಂದು ಅನೇಕ ತಜ್ಞರು ಹೇಳಿದ್ದಾರೆ. ತಾವು ಈ ರೀತಿ ಉತ್ತರ ಕೊಟ್ಟಿರುವುದಕ್ಕೆ ಅಲ್ಲಿರತಕ್ಕ ಅಸಿಸ್ಟೆಂಟ್ ಇಂಜಿನಿಯರ್‌ಗೂ ಮತ್ತು ಹಳ್ಳಿಯವರಿಗೂ ವ್ಯಾಜ್ಯ ಆಗಿ ಈ ರೀತಿ ರಿಪೋರ್ಟ್ ಕೊಟ್ಟಿದ್ದಾರೆ. ಬೇರೆ ಅಸಿಸ್ಟೆಂಟ್ ಇಂಜಿನಿಯರನ್ನು ಕಳುಹಿಸಿ, ಇದನ್ನು ಪುನ : ಇನ್‌ವೆಸ್ಟಿಗೇಟ್ ಮಾಡಿಸುತ್ತೀರಾ ?

9–00 A.M.

† ಶ್ರೀ ಎಸ್. ಬಿ. ನಾಗರಾಳ್.—ನಾನು, ನನಗೆ ಬಂದಿರುವ ರಿಪೋರ್ಟ್‌ನ ಪ್ರಕಾರ ಹೇಳಿದ್ದೇನೆ. ಮತ್ತೊಮ್ಮೆ ಏನಾದರೂ ಇನ್‌ವೆಸ್ಟಿಗೇಟ್ ಮಾಡಿಸುವುದಾದರೆ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ.—ಆಲೂರು ತಾಲ್ಲೂಕು ಸೆಮಿಮಲನಾಡು ಏರಿಯಾ, ಕೂಡಲೆ ಅಲ್ಲಿಗೆ ತಜ್ಞರನ್ನು ಕಳುಹಿಸಿ, ಇದರ ಫೀಸಿಬಿಲಿಟಿಯ ಬಗ್ಗೆ ತಿಳಿಯುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಈ ಲಫ್ ಇರಿಗೇಷನ್ ಸ್ಕೀಂ ತೆಗೆದುಕೊಳ್ಳತಕ್ಕದ್ದು ಯಗಚಿ ನದಿಯಿಂದ ತೆಗೆದುಕೊಳ್ಳಬೇಕಾಗಿದೆ. ನದಿಯಲ್ಲಿ 30 ಕ್ಯೂಸೆಕ್ ನೀರು ಇದೆ. ಮತ್ತೆ ಪುನ : ಇದರ ನೀರನ್ನು ಡಿಪ್ಲೀಟ್ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಅವರು ಹೇಳಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಯಗಚಿ ಪ್ರಾಜೆಕ್ಟ್ ಕಟ್ಟಿ ಎಂದರೂ ಅದು ಹಾಗೇ ಇದೆ. ವರ್ಷದಲ್ಲಿ ಮುಂಗಾರು ಮಳೆ ಬಂದಮೇಲೆ, ಮಧ್ಯೆ ಮೂರು ತಿಂಗಳು ಮಳೆಯಿಲ್ಲದೆ, ಹೈರುಗಳು ನಿರ್ಣಾಮವಾಗುತ್ತಿದೆ. ಕೊನೆಯ ಪಕ್ಷ ಡ್ರೈ ಕ್ರಾಪ್‌ಗಾದರೂ ನೀರನ್ನು ಒದಗಿಸಿ ಅಲ್ಲಿಯ ಜನರನ್ನು ಬದುಕಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಮತ್ತು ಇನ್ನೊಂದು ಸಾರಿ ಲಫ್ ಇರಿಗೇಷನ್ ಸ್ಕೀಂನ ಬಗ್ಗೆ ಇನ್‌ವೆಸ್ಟಿಗೇಟ್ ಮಾಡಿಸುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಪಿಕ್ ಅಪ್‌ಗಳು ಆಲೂರು ತಾಲ್ಲೂಕನಲ್ಲಿ ಇವೆ. ತಾವು ಹೇಳುವುದು, ಯಾವ ಊರಿನವರು ಇದರಿಂದ ಬದುಕುವುದಕ್ಕೆ ಸಾಧ್ಯವಾಗುತ್ತದೆ ಎಂದು ?

ಶ್ರೀ ಕೆ. ಎಚ್. ಹನುಮೇಗೌಡ.—ಇಡೀ ಆಲೂರು ತಾಲ್ಲೂಕು ಜನರು.

ಶ್ರೀ ಡಿ ದೇವರಾಜ ಅರಸ್.—ಆಲೂರು ತಾಲ್ಲೂಕಿನಲ್ಲಿ ಕಷ್ಟವಾಗಿದೆ ಎಂದರೆ, ಇಡೀ ದೇಶದಲ್ಲಿ ಕಷ್ಟವಾಗಿದೆ. ಆಲೂರು ತಾಲ್ಲೂಕಿನಲ್ಲಿ ಮೂರು ಕಡೆ ಲಫ್ ಇರಿಗೇಷನ್ ಮಾಡಬೇಕು ಎಂದು ಕೇಳಿದ್ದಾರೆ ಯಗಚಿ ನದಿಯು ನೀರಿ ಅಳತೆ ಅಷ್ಟು ಇದೆ, ಆದ್ದರಿಂದ ಯಾರು ಏನೂ ಮೋಸ ಮಾಡುವುದಕ್ಕಾಗುವುದಿಲ್ಲ. ನೀರು ಕಡಿಮೆ ಇದ್ದರೆ ಲಫ್ ಮಾಡುವುದು ಹೇಗೆ ಎನ್ನುವುದನ್ನು ಯೋಜನೆ ಮಾಡಿ ?

ಶ್ರೀ ಕೆ. ಎಂ. ರುದ್ರಪ್ಪ.—ಬೇಲ್ಲೂರು, ತಿವ್ವಾಪುರ, ಮತ್ತು ದಿಂಡಗಟ್ಟ ಈ ಮೂರಕೂ ಒಂದೇ ಕಡೆ ಶಂಕತೀರ್ಥಹಳ್ಳಕ್ಕೆ ಲಫ್ ಇರಿಗೇಷನ್ ಸ್ಕೀಂ ಕೇಳಿರುವುದು. ಆಲೂರು ತಾಲ್ಲೂಕು ಸೆಮಿ ಮಲನಾಡು ಏರಿಯಾ. ಇದರಿಂದ ಮೂರು ಹಳ್ಳಿಗಳಿಗೂ ಪ್ರಯೋಜನವಾಗುತ್ತದೆ.

Sri D. DEVARAJ URS.—Let us examine this again

MADAM SPEAKER.—Now Questions are over.